

# ದೈತ್ಯ ಸಿಕ್ವೊಯಾ ಮರ

ಭೂಮಿಯ ಮೇಲಿನ ಅತಿದೊಡ್ಡ ಮರಗಳಲ್ಲಿ ಕ್ಯಾಲಿಫೋರ್ನಿಯಾದ ಜನರಲ್ ಶೆರ್ಮನ್ ಟ್ರೀ ದೈತ್ಯಾತಿ ದೈತ್ಯ. ಇದಕ್ಕೆ ಸಿಕ್ವೊಯಾ ಮರ ಎಂದೂ ಹೆಸರಿದೆ. ಇದರ ಎತ್ತರ 275 ಅಡಿ. ಕಾಂಡದ ಬುಡದ ಸುತ್ತ ವೃತ್ತಾಕಾರದ ಅಳತೆ 102 ಅಡಿಗಳಿಗಿಂತ ಹೆಚ್ಚಿರುವ ಇದು, ಆಕಾಶದ ಎತ್ತರಕ್ಕೆ ಏರುತ್ತಿದ್ದು ಇನ್ನೂ ಬೆಳೆಯುತ್ತಿದೆ. 2300 ವರ್ಷಗಳ ಹಳೆಯದು ಎಂದು ನಂಬಲಾಗಿರುವ ಈ ದೈತ್ಯಮರಕ್ಕೆ 1879ರಲ್ಲಿ ನೈಸರ್ಗಿಕವಾದಿ ಜೇಮ್ಸ್ ವೊಲ್ವರ್ಟನ್ ಜನರಲ್ ಶೆರ್ಮನ್ ಎಂದು ಹೆಸರಿಸಿದ.

ಶೆರ್ಮನ್ ಮರವಿರುವ ರಾಷ್ಟ್ರೀಯ ಉದ್ಯಾನವನಗಳನ್ನು ಯಾರು ಬೇಕಾದರೂ ಸುಲಭವಾಗಿ ಪ್ರವೇಶಿಸಬಹುದು. ಸಿಕ್ವೊಯಾ ಮತ್ತು ಕಿಂಗ್ಸ್ ಕ್ಯಾನ್ಯನ್ ರಾಷ್ಟ್ರೀಯ ಉದ್ಯಾನವನಗಳಲ್ಲಿ ಜೈಂಟ್ ಫಾರೆಸ್ಟ್ ಎಂದು ಕರೆಯಲ್ಪಡುವ ಪ್ರದೇಶದ ಉತ್ತರ ತುದಿಯಲ್ಲಿರುವ ಎರಡು ಮಾರ್ಗಗಳು ಈ ಮರಕ್ಕೆ ದಾರಿ ಮಾಡಿಕೊಡುತ್ತದೆ.

ಈ ಮರವನ್ನು ವೀಕ್ಷಿಸಲು ಉಚಿತವಾಗಿ ಬಸ್ಸುಗಳನ್ನು ಬಿಡಲಾಗಿದೆ. ಇದರಿಂದ ಈ ಅದ್ಭುತ ಮರದ ಬುಡದವರೆಗೂ ಪ್ರವಾಸಿಗರು ಸುಲಭವಾಗಿ ತಲುಪಬಹುದು ಹಾಗೂ ದಾರಿಯುದ್ದಕ್ಕೂ ಶೆರ್ಮನ್ ಮರದ ಅಗಾಧತೆಯ ಅನುಭವವನ್ನು ಪಡೆಯಬಹುದು. ಸಿಯಾರಾ ನೆವಾಡಾ ಪರ್ವತಗಳ ಇಳಿಜಾರಿನಲ್ಲಿ ಸುಮರು 260 ಮೈಲಿ ಉದ್ದಕ್ಕೂ ದೈತ್ಯ ಸಿಕ್ವೊಯಾಗಳು ಬೆಳೆಯುತ್ತವೆ. ಈ ದೈತ್ಯ ಮರವು 3000 ವರ್ಷಗಳವರೆಗೂ ಬದುಕಬಲ್ಲದು. ಈ ಮರಗಳ ದೊಡ್ಡ ಶಾಖೆಗಳು ಎಂಟು ಅಡಿ ವ್ಯಾಸವನ್ನು ಹೊಂದಿದ್ದು ದಪ್ಪ ಚರ್ಮವಿದ್ದು ಇದರ ತೊಗಟೆ 3 ಅಡಿಗಳಷ್ಟು ದಪ್ಪವಿರುತ್ತದೆ.

■ ಎಸ್. ಪ್ರಭಾವತಿ, ಬೆಂಗಳೂರು

